**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 277/2018**

| | | |
|---|---|---|
| ಸಾಕ್ಷಿಯ ಹೆಸರು | : ಅಮರನಾರಾಯಣ್ | |
| ತಂದೆಯ ಹೆಸರು | : ಯಲ್ಲಪ್ಪ | |
| ವಯಸ್ಸು | : 65 ವರ್ಷ | |
| ಉದ್ಯೋಗ | ರಿಟೈರ್ಡ ಡಿ.ವೈ.ಎಸ್.ಪಿ, ಕೊರಮಂಗಲ | ಚಾಸಾ -23 |
| ವಾಸ ಸ್ಥಳ | : ಕೊರಮಂಗಲ , ಬೆಂಗಳೂರು | ಫ್ರಾಸಾ -13 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 07.07.2026

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು 15.10.2013 ರಿಂದ 02.08.2017 ರವರೆಗೆ ಸಿ.ಪಿ.ಐ ಕೊಳ್ಳೇಗಾಲ ವೃತ್ತದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 03.11.2016 ರಂದು ಈ ಕೇಸಿನ ಕಡತವನ್ನು ಚಾಸಾ 22 ರವರಿಂದ ವಶಕ್ಕೆ ಪಡೆದು ಪರಿಶೀಲನೆ ಮಾಡಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ಮಾಡಿರುತ್ತೇನೆ. ದಿನಾಂಕ 08.11.2016 ರಂದು ಈ ಪ್ರಕರಣದ ಪಿರ್ಯಾದುದಾರರನ್ನು ಕೃತ್ಯ ನಡೆದ ಸ್ಥಳಕ್ಕೆ ಬರಮಾಡಿಕೊಂಡು ಅವರು ಸ್ಥಳದಲ್ಲಿ ಹಾಜರಿದ್ದು ಸ್ಥಳವನ್ನು ಪರಿಶೀಲನೆ ಮಾಡಿರುತ್ತೇನೆ. ಸ್ಥಳಕ್ಕೆ ಪಂಚಾಯತುದಾರರಾದ ಚಾಸಾ 2 ಮತ್ತು 4 ರವರ ಸಮಕ್ಷಮ ನಿಪಿ-2 ರಂತೆ ಸ್ಥಳಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಇದೇ ದಿನ ಸಾಕ್ಷಿ ಚಾಸಾ 2 ಮತ್ತು 3 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಪಂಚನಾಮೆ ಸಂದರ್ಭದಲ್ಲಿ ಸ್ಥಳದ ಭಾವಚಿತ್ರವನ್ನು ತೆಗೆದಿರುತ್ತೇವೆ. ಈ ಪ್ರಕರಣ ಆರೋಪಿಗಳ ಪತ್ತೆ ಬಗ್ಗೆ ನಾನು ಮತ್ತು ಸಿಬ್ಬಂಧಿ ಕ್ರಮ ಕೈಗೊಂಡಿದ್ದು ಪತ್ತೆ ಆಗಿರುವುದಿಲ್ಲ. ದಿನಾಂಕ 02.08.2018 ರಂದು ನನಗೆ ವರ್ಗಾವಣೆ ಆದ ಪ್ರಯುಕ್ತ ಹೊಸದಾಗಿ ಸಿ.ಪಿ.ಐ ಆಗಿ ವರದಿ ಮಾಡಿಕೊಂಡ ಚಾಸಾ 24 ರವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ. ನಿಪಿ-2 ನ್ನು ತೂರಿಸಲಾಗಿ ಅದನ್ನು ನೋಡಿ ಗುರುತಿಸಲಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ . ಅದನ್ನು ನಿಪಿ-15 ರಿಂದ 18 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – ಆರೋಪಿಗಳ ಪರ ವಕೀಲರಿಂದ**

ಆರೋಪಿ ನನ್ನ ಅವಧಿಯಲ್ಲಿ ಪತ್ತೆ ಆಗಿರುವುದಿಲ್ಲ. ನಾನು ಚಾಸಾ 1 ರವರನ್ನು ದೂರು ನೀಡಿದ ಸಮಯದಲ್ಲಿ ಪ್ರಾಥಮಿಕ ತನಿಖೆ ಮಾಡಿ ಕಳೆದು ಹೋಗಿದೆ ಎಂದು ಹೇಳಿದ ಆಭರಣಕ್ಕೆ ಸಂಬಂಧಪಟ್ಟ ಬಿಲ್ಲುಗಳನ್ನು ಪಡೆದುಕೊಂಡಿರುವುದಿಲ್ಲ. ಸದರಿ ಆಭರಣವನ್ನು ಧರಿಸಿರುವ ಬಗ್ಗೆ ಪೋಟೋ ಅಥವಾ ವಿಡಿಯೋ

ಪಡೆದುಕೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಮಹಜರು ಮಾಡಿಲ್ಲ ಅದನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು. )

ಓ ಹೇ ಕೇ ಸಾ ಸ ಇ ಒ

(ಸುನೀತ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.